



ಪ್ರತಿಮೆಯ ನಿರ್ಮಾಣಕ್ಕಾಗಿ ಆಗ್ರಾ, ನೋಯ್ಡಾ ಮತ್ತು ಜೈಪುರದಿಂದ ಕಲ್ಲುಗಳನ್ನು ತರಿಸಿ, ರಾಸಾಯನಿಕಗಳನ್ನು ಬಳಸಿ ಸಂಸ್ಕರಿಸಲಾಗಿದೆ. 150 ಟನ್ ಉಕ್ಕು ಹಾಗೂ 110 ಟನ್ ಕಂಚನ್ನೂ ಪ್ರತಿಮೆ ನಿರ್ಮಾಣಕ್ಕೆ ಬಳಸಲಾಗಿದೆ. ಅಂಬೇಡ್ಕರ್ ಜೀವನದ ಪ್ರಮುಖ ಘಟನೆಗಳನ್ನು ಬಿತ್ತರಿಸುವ ದೃಕ್–ಶ್ರವಣ ವ್ಯವಸ್ಥೆ ಹಾಗೂ ಗ್ರಂಥಾಲಯ ಅಲ್ಲಿದೆ.

ಹುಸೇನ್ ಸಾಗರದಲ್ಲಿರುವ ಬುದ್ಧ ಪ್ರತಿಮೆಯ ಮೂಲಕ ಹೈದರಾಬಾದ್ ಬುದ್ಧಪ್ರೇಮಿಗಳಿಗೆ ಪ್ರಿಯವಾದುದು. ಈಗ ಅಂಬೇಡ್ಕರ್ ಪ್ರತಿಮೆಯ ಮೂಲಕ ಬುದ್ಧ ಹಾಗೂ ಭೀಮಪ್ರೇಮಿಗಳಿಗೆ ಹೈದರಾಬಾದ್ ಮತ್ತಷ್ಟು ಆಪ್ತವಾಗಲಿದೆ. ಬುದ್ಧನ ಪ್ರತಿಮೆಗೆ ಸಮೀಪದಲ್ಲಿಯೇ ಅಂಬೇಡ್ಕರ್ ಪ್ರತಿಮೆಯೂ ಇದೆ. ಈ ಬುದ್ಧ–ಭೀಮ ಸಮೀಕರಣ ಇಂದಿಗೆ ಅಗತ್ಯವಾದ ಸಾಮಾಜಿಕ ಸೌಹಾರ್ದದ ರೂಪಕದಂತಿದೆ.

ಅಂಬೇಡ್ಕರ್ ಪ್ರತಿಮೆ ನಿರ್ಮಾಣದಲ್ಲಿ ತೆಲಂಗಾಣದೊಂದಿಗೆ ಆಂಧ್ರಪ್ರದೇಶ ಸರ್ಕಾರವೂ ಸ್ಪರ್ಧೆಗೆ ಬಿದ್ದಿದೆ. ವಿಜಯವಾಡದಲ್ಲಿ 175 ಅಡಿಗಳ ಎತ್ತರದ ಪ್ರತಿಮೆ ರೂಪುಗೊಳ್ಳುತ್ತದೆ. ಈ ಪ್ರತಿಮೆ ಪೂರ್ಣಗೊಳ್ಳಲಿಕ್ಕೆ ಇನ್ನೂ ಒಂದೆರಡು ತಿಂಗಳು ಬೇಕು. ಆದರೆ, ಈ ವರ್ಷದ ಏಪ್ರಿಲ್ 14ರ 'ಅಂಬೇಡ್ಕರ್ ಜಯಂತಿ'ಯಂದೆ ಪ್ರತಿಮೆ ಲೋಕಾರ್ಪಣೆಗೊಳ್ಳುತ್ತಿದೆ.

ವರ್ತಮಾನದ ವಿದ್ಯಮಾನಗಳು ಸಮುದಾಯಗಳ ನಡುವೆ ಬಿಕ್ಕಟ್ಟುಗಳನ್ನು ಉಂಟುಮಾಡುತ್ತಿರುವ ಸಂದರ್ಭದಲ್ಲಿ, ಬಹುತ್ವವೇ ಈ ದೇಶದ ಅಸ್ತಿವಾರವೆಂದು ಸಾರುವ ಸಂವಿಧಾನವನ್ನು ರೂಪಿಸಿದ ಅಂಬೇಡ್ಕರ್ ಸ್ಮರಣೆಗೆ ವಿಶೇಷ ಮಹತ್ವವಿದೆ. ದಕ್ಷಿಣ ಭಾರತದ ಎರಡು ರಾಜ್ಯಗಳಲ್ಲಿ ತಲೆಯೆತ್ತಿರುವ ಅಂಬೇಡ್ಕರ್ ಪ್ರತಿಮೆಗಳು ವ್ಯಕ್ತಿಯನ್ನಷ್ಟೇ ಸೂಚಿಸುತ್ತಿಲ್ಲ; ಸಂವಿಧಾನವನ್ನು ಭಾರತೀಯರಿಗೆ ಸದಾ ಮನನ ಮಾಡಿಸುವ ರೂಪಕಗಳಂತೆಯೂ ಕಾಣಿಸುತ್ತಿವೆ.

ಪ್ರತಿಕ್ರಿಯಿಸಿ: **feedback@sudha.co.in**